# MODEL PAPER - 01K & 02K
## ಕನ್ನಡ ಮಾದರಿ ಪ್ರಶ್ನೆಪತ್ರಿಕೆ-2025-06

| Sub : Kannada (First Language) | Time: 3 Hrs 15 Mins<br>Max. Marks: 100 |
|---|---|

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಪ್ರಶ್ನೆಪತ್ರಿಕೆಯಲ್ಲಿ ಮೂರು ವಿಭಾಗಗಳು ಇರುತ್ತವೆ.
2. ಪ್ರಶ್ನೆಪತ್ರಿಕೆ ಓದುವದಕ್ಕೆ 15 ನಿಮಿಷಗಳು, ಉತ್ತರ ಬರೆಯುವುದಕ್ಕೆ 3 ಗಂಟೆಗಳು ಸಮಯ ಕೊಡಲಾಗಿದೆ.
3. ಎಲ್ಲಾ ಪ್ರಶ್ನೆಗಳು ಉತ್ತರಗಳು ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು.
4. ಉತರಗಳು ದುಂಡಾಗಿ, ಸ್ಪಷ್ಟವಾಗಿ ಬರೆಯಬೇಕು.

## ವಿಭಾಗ : I

**I. ಅವಗಾಹನೆ-ಪ್ರತಿ ಸ್ಪಂದನೆ** **24 ಅಂಕಗಳು**

**I. ಈ ಕೆಳಗಿನ ಪರಿಚಿತ ಪದ್ಯಗಳಲ್ಲಿ ಒಂದನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ** **8 ಅಂಕಗಳು**

1. ಕಲುಷಿತವಾದಿ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.

– ಜಿ.ಎಸ್.ಶಿವರುದ್ರಪ್ಪ

**ಪ್ರಶ್ನೆಗಳು:**

ಅ) ನದೀ ಜಲಗಳು ಏನಾಗಿವೆ?
ಆ) ಕಾಡು ಮೇಡುಗಳು ಏನಾಗಿವೆ?
ಇ) ಯಾವುದಕ್ಕೆ ಮುಂಗಾರಿನ ಮಳೆ ಯಾಗಬೇಕು?
ಈ) ಮೇಲಿನ ಪದ್ಯ ಬರೆದ ಕವಿಯಾರು?

(ಅಥವಾ)

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯ ಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು.

– ಕುಮಾರವ್ಯಾಸ

**ಪ್ರಶ್ನೆಗಳು:**

ಅ) ಮೊದಲಿಗನು ಯಾರು?
ಆ) ಕಲಿಭೀಮ ಎಷ್ಟನೆಯವರು?
ಇ) ಫಲುಗುಣ ಎಂದರೆ ಯಾರು?
ಈ) ಮೇಲಿನಪದ್ಯ ಬರೆದ ಕವಿಯಾರು?

**2. ಕೆಳಗಿನ ಪರಿಚಿತ ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ:** **6 ಅಂಕಗಳು**

ರಾಮಾಯಣ ಮಹಾಕಾವ್ಯವು ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದು. ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ಧ, ಅಸಂಖ್ಯಾತ ಭಕ್ತರಲ್ಲಿ ಶಬರಿಯೂ ಒಬ್ಬಳು. ಈಕೆ ಮತಂಗ ಋಷಿಯ ಆಶ್ರಮದಲ್ಲಿದ್ದವಳು. ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು... ದನು ಎಂಬವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.

**ಪ್ರಶ್ನೆಗಳು:**

ಅ) ಭಾರತೀಯರ ಪವಿತ್ರ ಗ್ರಂಥಯಾವುದು?

ಆ) ಶಬರಿಯು ಯಾರ ಆಶ್ರಮದಲ್ಲಿದ್ದಳು?

ಇ) ಈಕೆಯ ಗುರಿ ಏನಾಗಿತ್ತು?

ಈ) ರಾಮಲಕ್ಷ್ಮಣರು ಯಾರ ಸೂಚನೆಯಂತೆ ಮತಂಗಾಶ್ರವನ್ನು ಪ್ರವೇಶಿಸಿದರು?

**3. ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ:** **8 ಅಂಕಗಳು**

ಅ) ಈಕೆಯ ಜನ್ಮ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ.

ಆ) ಅಕ್ಕ ಮಹಾದೇವಿಯು (ಕಾಲ.ಸಾ.ಕ.ಸುಮಾರು 1160) ಶಿವಶರಣೆಯರಲ್ಲಿ ಪ್ರಮುಖಳು.

ಇ) ಯೋಗಾಂಗತ್ರಿವಿಧಿ, ಸೃಷ್ಟಿವಚನ ಮತ್ತು ಮಂತ್ರಗೋಪ್ಯ ಕೃತಿಗಳನ್ನು ರಚಿಸಿದ್ದಾಳೆ.

ಈ) ಅಕ್ಕ ಮಹಾದೇವಿಯ ವಚನಗಳ ಅಂಕಿತ ಹಾಗೂ ಆರಾದ್ಯ ದೈವ ಚೆನ್ನಮಲ್ಲಿಕಾರ್ಜುನ.

## <u>ವಿಭಾಗ : II</u>

**II. ವ್ಯಕ್ತಿಕರಣ–ಸೃಜನಾತ್ಮಕತೆ:** **44 ಅಂಕಗಳು**

**ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿರಿ:** **3x4=12 ಅಂಕಗಳು**

4. 'ಛಲಮನೆ ಮೆರೆವೆಂ' ಪದ್ಯ ಭಾಗದಿಂದ ಕವಿರನ್ನ ಪರಿಚಯ ಬರೆಯಿರಿ?
5. ಶಾನು ಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿರಿ?
6. ಗುರೂಪದೇಶವು ಯಾರಿಗೆ ಮೆಚ್ಚಿಗೆ ಯಾಗುವುದಿಲ್ಲ?

**ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **4x8=32 ಅಂಕಗಳು**

7. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

   (ಅಥವಾ)

   ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.
8. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡೂವ ಬಗೆಯನ್ನು ವಿವರಿಸಿ.

   (ಅಥವಾ)

   ಸಪ್ತವ್ಯಸನಿಗಳಾಗಿದ್ದ ಅಗ್ನಿ ಭೂತಿ ವಾಯು ಭೂತಿಯರು ಪಂಡಿತರಾದುದು ಹೇಗೆ?
9. 'ವಸಂತ ಮುಖತೋರಲಿಲ್ಲ' ಕವನದ ಸಾರಾಂಶವನ್ನು ಬರೆಯಿರಿ:

   (ಅಥವಾ)

   ಜ್ಞಾನಿ – ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕ ಮಹಾದೇವಿಯ ಅಭಿಪ್ರಾಯವೇನು? ವಿವರಿಸಿ.

10. ದಾರಿದೀಪ ಹಾಕಿಸುವಂತೆ ಪಂಚಾಯಿತಿಯವರಿಗೆ ಒಂದು ಪತ್ರ ಬರೆಯಿರಿ.

(ಅಥವಾ)

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

## ವಿಭಾಗ : III

**ಭಾಷಾಂಶಗಳು:** **32 ಅಂಕಗಳು**

**ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರಿಸಿರಿ:** **9x2=18 ಅಂಕಗಳು**

11. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು".
(ಈ ವಾಕ್ಯದಲ್ಲಿರುವ ಅಲಂಕಾರ ಗುರ್ತಿಸಿ, ಹೆಸರು, ಲಕ್ಷಣ ಬರೆಯಿರಿ)

12. ಒಡೆಯಲ ಜಾಂಡಂ ಕುಲಗಿರಿ
ಕೆಡೆಯಲ್ ನಡುಗಲ್ಕೆಧಾತ್ರಿದಿ ವಿಜರ್ಸೆಡೆಯಾ
(ಕೊಟ್ಟಿರುವ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸಿನ ಹೆಸರು ಬರೆಯಿರಿ)

13. ಅ) ಲವನು ಅಶ್ವವನ್ನು ಕದಳಿ ಗಿಡಕ್ಕೆ ಕಟ್ಟಿದನು
(ಗೆರೆ ಎಳೆದ ಪದಕ್ಕೆ ಅರ್ಥ ಬರೆಯಿರಿ)
ಆ) ಹುಲಿಯ ಘ್ರಾಣೇಂದ್ರಿಯ ಬಹಳ ಚುರುಕಾಗಿರುತ್ತದೆ.
(ಗೆರೆ ಎಳೆದ ಪದದ ಅರ್ಥ ಗುರ್ತಿಸಿ ಬರೆಯಿರಿ)
ಅ) ನಾಲಿಗೆ ಆ) ಮೂಗು ಇ) ಕಣ್ಣು ಈ) ಕಿವಿ

14. ಅ) ಹಕ್ಕಿಯು ಅಂಬರದಲ್ಲಿ ಹಾರುತ್ತಿದೆ ನೋಡಿದಿರಾ?
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಬರೆಯಿರಿ)
ಆ) ಇದು ಅರಸನ ವಾಜಿಯಂ ಬಿಡು ಎಂದರು ಸ್ನೇಹಿತರು.
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಗುರ್ತಿಸಿ ಬರೆಯಿರಿ)
ಅ) ಕುದುರೆ, ತುರಂಗ ಆ) ಆನೆ, ವಾಜಿ
ಇ) ಗಜ, ಅಸುರ ಈ) ತುರಂಗ, ಮೂಷಿಕ

15. ಅ) ಮೈಸೂರು ಪತ್ತನದ ಅರಸ ನಾಲ್ವಡಿ ಕೃಷ್ಣರಾಯರು.
(ಗೆರೆ ಎಳೆದ ಪದಕ್ಕೆ ತತ್ಸಮ ಪದ ಬರೆಯಿರಿ)
ಆ) ರಾಮನು ಸೂರ್ಯ ವಂಶದವನು
(ಗೆರೆ ಎಳೆದ ಪದಕ್ಕೆ ತದ್ಭವ ಪದ ಬರೆಯಿರಿ)
ಅ) ವಶ ಆ) ಸೂರ್ಯ ಇ) ಬಂಚ ಈ) ವಂಸ

16. ಅ) ಮಲ್ಲಣ್ಣನ ಜಾತ್ರೆಯಲ್ಲಿ ಪಟಾಕಿಗಳು ಅಂಬರಕ್ಕೇರಿದವು.
(ಗೆರೆ ಎಳೆದ ಪದಕ್ಕೆ ನಾನಾರ್ಥ ಪದಗಳು ಪರೆಯಿರಿ)
ಆ) ಅವನು ಬರೆದ ಉತ್ತರ ಸರಿಯಾಗಿತ್ತು.
(ಗೆರೆ ಎಳೆದ ಪದಕ್ಕೆ ನಾನಾರ್ಥ ಗುರ್ತಿಸಿರಿ)
ಅ) ಉತ್ತರೆ, ಉತ್ತ ಆ) ಉತ್ತರಗಳು, ಪ್ರಶ್ನೆ
ಇ) ಬಡಗಣ, ಜವಾಬು ಈ) ಪ್ರಶ್ನೆ, ಗಣ

17. ಅ) ಮಕ್ಕಳು ಓಡಿ ಓಡಿ ದಣಿದರು.
(ದ್ವಿರುಕ್ತಿ ಪದವನ್ನು ಗುರ್ತಿಸಿ ಬರೆಯಿರಿ)

ಆ) ದ್ವಾರಕನ ಮನೆಯಲ್ಲಿ ಕೆನೆಮೊಸರು ಬಹಳ ಇರುತ್ತದೆ.
(ಗೆರೆ ಎಳೆದ ಪದವನ್ನು ಗುರ್ತಿಸಿ ಬರೆಯಿರಿ)
ಅ) ದ್ವಿರುಕ್ತಿ ಆ) ಉಕ್ತಿ ಇ) ಜೋಡುನುಡಿ ಈ) ನಾನಾರ್ಥ

18. ಹಬ್ಬದ ದಿನಗಳಲ್ಲಿ ಗುಡಿ ಗೋಪುರಗಳು ವಿದ್ಯುದೀಪಗಳಿಂದ ಕಣ್ಣೊಳಿಸುತ್ತಿದ್ದವು.
(ಮೇಲಿನ ವಾಕ್ಯದಲ್ಲಿ ನುಡಿಗಟ್ಟನ್ನು ಗುರ್ತಿಸಿ ಬರೆಯಿರಿ)
19. ರಾಮನನ್ನು ಕಂಡು ಶಬರಿಗೆ ಆನಂದದ ಕಂಬನಿ ಸುರಿಯಿತು.
(ಗೆರೆ ಎಳೆದ ನುಡಿಗಟ್ಟನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ)

**ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ: 14x1=14 ಅಂಕಗಳು**

20. ಅವನು ಊರೂರು ಅಲೆದು ಬಂದನು.
(ಗೆರೆ ಎಳೆದ ಪದವನ್ನು ಬಿಡಿಸಿ ಬರೆಯಿರಿ)
21. ಸೂರ್ಯ+ಉದಯ (ಸಂಧಿ ಪದವನ್ನು ಕೂಡಿಸಿ ಬರೆಯಿರಿ)
22. ಸುರಾಸುರರು ಹೋರಾಡಿ ಮಡಿದರು.
(ಗೆರೆ ಎಳೆದ ಪದದ ಸಂಧಿಯನ್ನು ಗುರ್ತಿಸಿರಿ)
ಅ) ಲೋಪ ಸಂಧಿ ಆ) ಗುಣ ಸಂಧಿ
ಇ) ಆಗಮ ಸಂಧಿ ಈ) ಸವರ್ಣದೀರ್ಘ ಸಂಧಿ
23. ಕಳ್ಳರು ನಡುರಾತ್ರಿಯಲ್ಲಿ ಬಂದು ಕಳ್ಳತನ ಮಾಡಿದರು.
(ಗೆರೆ ಎಳೆದ ಪದಕ್ಕೆ ವಿಗ್ರಹವಾಕ್ಯ ಬರೆಯಿರಿ)
24. ರಾಮನ ನಲ್ಗುದುರೆಯ ಹಣೆಯ ಮೇಲೆ ಪಟ್ಟಿ ಇತ್ತು.
(ಗೆರೆ ಎಳೆದಪದದ ಸಮಾಸ ಗುರ್ತಿಸಿರಿ)
ಅ) ತತ್ಪುರುಷ ಸಮಾಸ ಆ) ಕರ್ಮಧಾರೆಯ ಸಮಾಸ
ಇ) ಕ್ರಿಯ ಸಮಾಅ ಈ) ಅಂಶಿ ಸಮಾಸ
25. 'ನೆಲೆಕಿರಿವೆನೆಂದು ಬಗೆದಿರೆ ಚಲಕಿರಿವೆಂ'
(ಮೇಲಿನ ವಾಕ್ಯದ ಹೊಸ ಗನ್ನಡ ರೂಪ ಗುರ್ತಿಸಿರಿ)
ಅ) ಚಲಕ್ಕಾಗಿ ಹೋರಾಡುವೆನು
ಆ) ನೆಲಕ್ಕಾಗಿ ಹೋರಾಡಿ ಮಡಿವೆನು.
ಇ) ಭೂಮಿಗಾಗಿ ಹೋರಾಡುವುದಿಲ್ಲ. ಬದಲಾಗಿ ಚಲಕ್ಕಾಗಿ ಹೋರಾಡುವೆ.
ಈ) ಚಲಕ್ಕಾಗಿ ಅಲ್ಲ ನೆಲಕ್ಕಾಗಿ ಹೋರಾಡುವೆನು.
26. ಹಣತೆಯು ಎಣ್ಣೆ ಇಲ್ಲದೆ ಉರಿಯುತ್ತದೆ.
(ಮೇಲಿನ ವಾಕ್ಯವನ್ನು ವಿರುದ್ಧಾರ್ಥಕವಾಕ್ಯ ಬರೆಯಿರಿ)
27. ಕೆಳಗಿನ ಪದಗಳಲ್ಲಿ ನಿಷೇದಾರ್ಥಕ ಕ್ರಿಯಾಪದ ಗುರ್ತಿಸಿರಿ.
ಅ) ಓಡನು ಆ) ಓಡಿದನು ಇ) ಓಡುವನು ಈ) ಓಡಿದ
28. ಶಿರಿಡಿನಾಥ್ ಚೆನ್ನಾಗಿ ಓದುವನು. ಶಿರಿಡಿನಾಥ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ
(ಮೇಲಿನ ವಾಕ್ಯಗಳನ್ನು ಸಂಯುಕ್ತ ವಾಕ್ಯವಾಗಿ ಬದಲಾಯಿಸಿ ಬರೆಯಿರಿ)
29. ಹುಲಿಯು ಜಿಂಕೆಯನ್ನು ತಿಂದಿತು.
(ಕರ್ಮಣಿ ವಾಕ್ಯವನ್ನು ಗುರ್ತಿಸಿರಿ)
ಅ) ಜಿಂಕೆಯಿಂದ ಹುಲಿಯು ತಿಂದಿತು
ಆ) ಜಿಂಕೆಯನ್ನು ಹುಲಿಯು ತಿಂದಿತು
ಇ) ಹುಲಿಯಿಂದ ಜಿಂಕೆ ತಿನ್ನಲ್ಪಟ್ಟಿತು.
ಈ) ಹುಲಿಯು ಜಿಂಕೆಯನ್ನು ತಿನ್ನಲಿಲ್ಲ.

30. ಕುಂಪಣಿ ಸರಕಾರಕ್ಕೆ <u>ಇಸವಾಸ</u> ಇಲ್ಲ.
(ಗೆರೆ ಎಳೆದ ಪದಕ್ಕೆ ಗ್ರಾಂಥಿಕ ರೂಪ ಬರೆಯಿರಿ)

31. ದಶರಥನ ಮಗನು ಯಾರು?
(ಇದು ಎಂತಹ ವಾಕ್ಯ ಬರೆಯಿರಿ)

32. ಅಯ್ಯೋ ! ಹೀಗಾಗ ಬರದಿತ್ತು ! (ಇದು ಎಂತಹ ವಾಕ್ಯ ಗುರ್ತಿಸಿರಿ)
ಅ) ಭಾವಸೂಚಕ ವಾಕ್ಯ ಆ) ಪ್ರಶ್ನಾರ್ಥಕ ವಾಕ್ಯ
ಇ) ವಿದ್ಯರ್ಥಕ ವಾಕ್ಯ ಈ) ಮಿಶ್ರ ವಾಕ್ಯ

33. ದೇವರು ಅವನಿಗೆ ಒಳ್ಳೆಯದು ಮಾಡಲಿ.
(ಇದು ಎಂತಹ ವಾಕ್ಯ ಬರೆಯಿರಿ)

---- x x x x ----